ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
<u>ಸಿ.ಸಿ.1149/2024</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರವಿ ಜಿ.ಎ | ಪಿ.ಡಬ್ಲ್ಯೂ.1 |
| ತಂದೆಯ ಹೆಸರು | : | ಅಣ್ಣಪ್ಪ | ಸಿ.ಡಬ್ಲ್ಯೂ.1 |
| ವಯಸ್ಸು | : | 40 ವರ್ಷ | |
| ವೃತ್ತಿ | : | ಪಿ.ಎಸ್.ಐ ಆಲ್ದೂರು ಪೊಲೀಸ್ ಠಾಣೆ | |
| ವಾಸ | : | ಆಲ್ದೂರು | |

<u>ದಿನಾಂಕಃ 28-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು ದಿಃ08.01.2024 ರಿಂದ ದಿಃ15.02.2025 ರವರೆಗೆ ಚಿಕ್ಕಮಗಳೂರಿನ ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ08.10.2024 ರಂದು ಸಂಜೆಃ05.10 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಸಂತೆ ಮೈದಾನದಲ್ಲಿ ಯಾರೋ ಒಬ್ಬ ಆಸಾಮಿಯು ಅಕ್ರಮವಾಗಿ ಮಟ್ಕಾ ಜೂಜಾಟ ನಡೆಸುತ್ತಿರುವ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ. ಆಗ ನಾನು ಪ್ರ.ವ. ವರದಿಯನ್ನು ದಾಖಲು ಮಾಡಿ ದಾಳಿಗೆ ಹೊರಟಲ್ಲಿ ಆರೋಪಿಯು ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದುದರಿಂದ ನಾನು ಠಾಣೆಯಲ್ಲಿ ಇದ್ದಂತಹ ಚಾಸಾ-4 ಮಂಜುನಾಥ್ ಹಾಗೂ ಚಾಸಾ-5 ರವೀಂದ್ರರವರನ್ನು ಕರೆದುಕೊಂಡು ಇಲಾಖಾ ವಾಹನದಲ್ಲಿ ಸಂಜೆಃ05.15 ಗಂಟೆಗೆ ಠಾಣೆಯನ್ನು

ಬಿಟ್ಟು 05.20 ಗಂಟೆಗೆ ಸಂತೆ ಮೈದಾನದ ಮೀನು ಮಾರುಕಟ್ಟೆ ಹತ್ತಿರ ಹೋಗಿ ಇಲಾಖಾ ಜೀಪನ್ನು ನಿಲ್ಲಿಸಿರುತ್ತೇನೆ. ಅಲ್ಲಿಯೇ ನಡೆದುಕೊಂಡು ಹೋಗುತ್ತಿದ್ದ ಚಾಸಾ-2 ಲೋಕೇಶ್ ಹಾಗೂ ಚಾಸಾ-3 ಪ್ಯಾರು ರವರಿಗೆ ಸದರಿ ವಿಚಾರವನ್ನು ತಿಳಿಸಿ ಪಂಚರಾಗಿ ಬರುವಂತೆ ಕೇಳಿಕೊಂಡಿದ್ದು ಸದರಿಯವರು ಒಪ್ಪಿಕೊಂಡ ಮೇರೆಗೆ ಅವರಿಗೆ ನೋಟೀಸ್ ಅನ್ನು ಜಾರಿ ಮಾಡಿ ಅವರನ್ನು ಪಂಚರನ್ನಾಗಿಸಿಕೊಂಡು ಅಲ್ಲಿಂದ ನಡೆದುಕೊಂಡು ಸುಮಾರು ಮಾಹಿತಿ ಬಂದ ಸ್ಥಳದಿಂದ 100 ಅಡಿ ದೂರದಲ್ಲಿ ಮರೆಯಲ್ಲಿ ನಿಂತು ಗಮನಿಸಿರುತ್ತೇವೆ. ಆಗ ಯಾರೋ ಒಬ್ಬ ವ್ಯಕ್ತಿಯು 1 ರೂಪಾಯಿಗೆ 80 ರೂಪಾಯಿ, 10 ರೂಪಾಯಿಗೆ 800 ರೂಪಾಯಿ ಕೊಡುವುದಾಗಿ ಜೋರಾಗಿ ಕಿರುಚುತ್ತಾ ಸಾರ್ವಜನಿಕರಿಗೆ ಮಟ್ಕಾ ಜೂಜಾಟ ಆಡುವಂತೆ ಪ್ರಚೋದಿಸುತ್ತಿದ್ದನು. ಆಗ 2 ಜನ ಸಾರ್ವಜನಿಕರು ಸದರಿಯವರಿಗೆ ಹಣವನ್ನು ನೀಡಿ ಚೀಟಿಯನ್ನು ಬರೆಸಿಕೊಂಡಿದ್ದು ತಕ್ಷಣ ನಾವುಗಳು ದಾಳಿ ಮಾಡಿದಾಗ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ಕಂಡು ಇಬ್ಬರು ಸಾರ್ವಜನಿಕರು ಅಲ್ಲಿಂದ ಓಡಿ ಹೋಗಿರುತ್ತಾರೆ. ಮಟ್ಕಾ ಚೀಟಿಯನ್ನು ಬರೆಯುತ್ತಿದ್ದ ವ್ಯಕ್ತಿಯನ್ನು ಚಾಸಾ-4 ರವರು ಹಿಡಿದಿದ್ದು ನನ್ನ ಮುಂದೆ ಪಂಚರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಸದರಿ ಆಸಾಮಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಆಸೀಫ್ ಬಿನ್ ಇಲಿಯಾಸ್, 35 ವರ್ಷ, ಮುಸ್ಲಿಂ ಜನಾಂಗ, ವಾಸಃ ಸಂತೆ ಮೈದಾನ ಎಂದು ತಿಳಿಸಿರುತ್ತಾನೆ. ಸದರಿ ಆಸಾಮಿಗೆ ಸದರಿ ಸ್ಥಳದಲ್ಲಿ ಇರುವಿಕೆಯ ಬಗ್ಗೆ ವಿಚಾರಿಸಲಾಗಿ ಆತನು ಸಾರ್ವಜನಿಕರಿಂದ ಹಣವನ್ನು ಕಟ್ಟಿಸಿಕೊಂಡು ಮಟ್ಕಾ ಜೂಜಾಟ ನಡೆಸುತ್ತಿದ್ದುದಾಗಿ ತಿಳಿಸಿರುತ್ತಾನೆ. ಸದರಿ ವ್ಯಕ್ತಿಗೆ ಮಟ್ಕಾ ಜೂಜಾಟ

ನಡೆಸಲು ಪರವಾನಗಿ ಇದೆಯೇ ಎಂದು ವಿಚಾರಿಸಲಾಗಿ ಆತನು ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ. ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಆಸಾಮಿಯ ಅಂಗಶೋಧನೆ ಮಾಡಿದಾಗ ರೂ.1,160/- ಹಣ, ಒಂದು ನೀಲಿ ಇಂಕ್ ನ ಬಾಲ್ ಪೆನ್ ಹಾಗೂ ಅಂಕಿ ಸಂಖ್ಯೆ ಇರುವ ಒಂದು ಚೀಟಿಯನ್ನು ಆತನ ವಶದಿಂದ ವಶಪಡಿಸಿಕೊಂಡು ಮಹಜರ್ ಮುಖೇನ ಸದರಿ ವಸ್ತುಗಳನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ಅನ್ನು ಸಂಜೆಃ05.35 ರಿಂದ 06.35 ರವರೆಗೆ ತಯಾರಿಸಲಾಗಿರುತ್ತದೆ. ಮಹಜರ್ ಸಮಯದಲ್ಲಿ ಫೋಟೋ ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಮಹಜರ್ ಗೆ ಪಂಚರ, ಆರೋಪಿಯ ಹಾಗೂ ದಾಳಿಗೆ ಸಹಕರಿಸಿದ ಸಿಬ್ಬಂದಿಯವರ ಸಹಿಯನ್ನು ಪಡೆದುಕೊಂಡಿರುತ್ತೇವೆ. ನೋಟೀಸ್ ಅನ್ನು  ನೋಡುತ್ತಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-1(ಎ) ಇರುತ್ತದೆ. ಮಹಜರ್ ಅನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-2(ಎ) ಇರುತ್ತದೆ. 2 ಫೋಟೋಗಳನ್ನು ನೋಡುತ್ತಿದ್ದು ಅದನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು.

ವಶಪಡಿಸಿಕೊಂಡ ನೀಲಿ ಬಾಲ್ ಪೆನ್, ಒಂದು ಮಟ್ಕಾ ಚೀಟಿ ಹಾಗೂ ರೂ.1,160/- ನಗದು ಹಣವನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ರಿಂದ 3 ಎಂದು ಗುರುತಿಸಲಾಯಿತು. ಮು.ಮಾ.2 ಮಟ್ಕಾ ಚೀಟಿಯಲ್ಲಿ ನನ್ನ ಹಾಗೂ ದಾಳಿಗೆ ಸಹಕರಿಸಿದ ಸಿಬ್ಬಂದಿಗಳ, ಪಂಚರ ಹಾಗೂ ಆರೋಪಿಯ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಿಪಿ-3 ಭಾವಚಿತ್ರಗಳಲ್ಲಿ ಆರೋಪಿ ದಾಳಿಗೆ ಸಹಕರಿಸಿದ

ಸಿಬ್ಬಂದಿ ಚಾಸಾ-4, ಆರೋಪಿ, ನಾನು ಹಾಗೂ ಇಬ್ಬರು ಪಂಚರು ಕಂಡುಬರುತ್ತೇವೆ ಹಾಗೂ ಆರೋಪಿಯಿಂದ ವಶಪಡಿಸಿಕೊಂಡ ವಸ್ತುಗಳು ಕಂಡುಬರುತ್ತವೆ.

ನಂತರ ಸದರಿ ಆಸಾಮಿಗೆ ಸ್ಥಳದಲ್ಲಿ ನೋಟೀಸ್ ಅನ್ನು ಜಾರಿ ಮಾಡಿ ಮುಂದೆ ತನಿಖೆಗೆ ಸಹಕರಿಸಲು ಹೇಳಿ ಬಿಟ್ಟಿರುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿನ ಆರೋಪಿಯು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆತನನ್ನು ಗುರುತಿಸುವಲ್ಲಿ ತಮ್ಮ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ). ನಂತರ ವಶಪಡಿಸಿಕೊಂಡ ವಸ್ತುಗಳು ಹಾಗೂ ಮಹಜರ್ ನೊಂದಿಗೆ ಠಾಣೆಗೆ ಹಾಜರಾಗಿ ನನ್ನ ವರದಿಯನ್ನು ತಯಾರಿಸಿ ಎಸ್.ಹೆಚ್.ಓ ರವರ ಮುಂದೆ ಹಾಜರುಪಡಿಸಿರುತ್ತೇನೆ. ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-4(ಎ) ಇರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ನನಗೆ ದೂರವಾಣಿ ಮೂಲಕ ಮಾಹಿತಿ ಬಂದಿರುತ್ತದೆ. ಮಾಹಿತಿ ಬಂದ ಸಮಯದಲ್ಲಿ ಆರೋಪಿಯ ಬಗ್ಗೆ ಸಂಪೂರ್ಣ ಮಾಹಿತಿ ಇರಲಿಲ್ಲ. ಪ್ರ.ವ. ವರದಿಯನ್ನು ದಾಖಲು ಮಾಡಲು ಅನುಮತಿಯನ್ನು ನಮ್ಮ ಎಸ್.ಹೆಚ್.ಓ. ರವರು ಕೇಳಿರುತ್ತಾರೆ. ದಾಳಿಗೆ ಹೋಗುವ ಪೂರ್ವದಲ್ಲಿ ಯಾವುದೇ ಅನುಮತಿಯನ್ನು ಕೇಳಿರುವುದಿಲ್ಲ. ಮಾರ್ಕೇಟ್ ರಸ್ತೆಯಲ್ಲಿ ಸಾಕಷ್ಟು ಜನ ಸಂಚಾರ ಇರುತ್ತದೆ ಎಂದರೆ ಸರಿ. ನಾವು ಮರೆಯಲ್ಲಿ ನಿಂತು ಗಮನಿಸುವ ಸಮಯದಲ್ಲಿ ಯಾವುದೇ ಫೋಟೋ ಹಾಗೂ ವೀಡಿಯೋ ಮಾಡಿರುವುದಿಲ್ಲ.

ನಮ್ಮನ್ನು ನೋಡಿ ಅಲ್ಲಿ ಇದ್ದ ಸಾರ್ವಜನಿಕರು ಓಡಿ ಹೋಗಿದ್ದು ಅವರನ್ನು ಹಿಡಿಯಲು ಪ್ರಯತ್ನಪಟ್ಟರೂ ಸಿಕ್ಕಿರುವುದಿಲ್ಲ. ದಿಃ08.10.2024 ರಂದು ನಮ್ಮ ಬೀಟ್ ಪೊಲೀಸರು ಮಾಹಿತಿಯನ್ನು ತಿಳಿಸಿರುವುದಿಲ್ಲ. ಮು.ಮಾ.2 ಮಟ್ಕಾ ಚೀಟಿಯಲ್ಲಿ ಎಷ್ಟೆಷ್ಟು ಹಣ ಯಾರು ಯಾರು ಹೋಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಅದೇ ರೀತಿ ಯಾರ ನಂಬರ್ ಯಾರಿಗೆ ಹೋಗುತ್ತದೆ ಎನ್ನುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಅದೇ ರೀತಿ 1 ರೂಪಾಯಿಗೆ 80 ರೂಪಾಯಿ, 10 ರೂಪಾಯಿಗೆ 800 ರೂಪಾಯಿಗೆ ಎಂಬುದಾಗಿ ನಮೂದು ಇರುವುದಿಲ್ಲ ಎಂದರೆ ಸರಿ. ಯಾವ ನಂಬರ್ ಯಾರಿಗೆ ಸೇರಿರುತ್ತದೆ ಎನ್ನುವುದಾಗಿ ಚೀಟಿಯಲ್ಲಿ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ಮಟ್ಕಾ ಚೀಟಿಯಲ್ಲಿ 3 ಸಾಲಿನಲ್ಲಿ ನಮೂದಾದ ಹಣವನ್ನು ಒಟ್ಟು ಸೇರಿಸಿ ಕೆಳಗೆ ಒಟ್ಟು ಮೊತ್ತವನ್ನು ಬರೆಯಲಾಗಿರುತ್ತದೆ. ಮಟ್ಕಾ ಜೂಜಾಟ ಆನ್ ಲೈನ್ ಗೇಮ್ ಎಂದರೆ ಸಾಕ್ಷಿದಾರರು ಆಫ್ ಲೈನ್ ನಲ್ಲಿ ಕೂಡಾ ಆಡುತ್ತಾರೆ ಎನ್ನುತ್ತಾರೆ. ಮಟ್ಕಾ ಜೂಜಾಟ ಎಲ್ಲವೂ ಆನ್ ಲೈನ್ ನಲ್ಲಿ ನಡೆಯುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ ಹಾಗೂ ಪಂಚರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ ಹಾಗೂ ಮಹಜರ್ ಅನ್ನು ತಯಾರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಸ್ಥಳದಲ್ಲಿ ಮು.ಮಾ.1 ರಿಂದ 3 ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಹಾಗೂ ಭಾವಚಿತ್ರವನ್ನು

ತೆಗೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ವರದಿ ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ